dc-3444
T.P-2

(1)

51st Year of Publication ★ SATYAVADI Daily, MYSORE 4

Reg No B G 155

30 - 7 - 1968

ಪ ಮುಖ ನತರ್ಕಮೂಸಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿವಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯಮೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋದುವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ಥಾಪಕರು : ಆರನುತೆ ಸರ್ವೀಸಾಗ್ ಎಂ. ವಿ. ಸುಬ್ಬರಾವ್ ಪೂಷಾಪತಿ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಂಧ್ರ ಮುಖ್ಯ ಮಂತ್ರಿಯವರ ಹಗಲು ಕನಸು

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮಜ್ಜಗದ್ಗುರುಗಳವರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರಪಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ಸಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ವಿವಾಹ ಮಹೋತ್ಸವ

ಮೈಸೂರಿನ ಅಡ್ವೊಕೇಟ್ ಶ್ರೀ ಎಂ. ಪರಮೇಶ್ವರಯ್ಯನವರ ಪುತ್ರಿ ಸೌ॥ ರಾಜೇಶ್ವರಿ, ಎಂಎಸ್ಸಿ, ಮತ್ತು ಕೊಯಮತ್ತೂರು ಡಾ ॥ ಎಸ್. ಆರ್. ಶ್ರೀಕಂಠಯ್ಯನವರ ಪುತ್ರ ಚಿ॥ ಎಸ್. ಎಸ್. ನರಸಿಂಹ, ಬಿ ಎ, ಎಂ ಬಿ ಬಿ ಎಸ್, ಎಂ ಆರ್ ಸಿ ಪಿ (ಲಂಡ್) ಎಂ ಆರ್ ಸಿ ಪಿ (ಗ್ಲಾಸ್) ಇವರ ವಿವಾಹಮಹೋತ್ಸವವು ಭಾನುವಾರ ವೈಭವವಾಗಿ ನೆರವೇರಿತು.

ಮರಣದಂಡನೆ ವಜಾ ಆಗಲಿ

ಅಮೇರಿಕಾದ ಅಟ್ಲಾಂಟಾ ರಾಸೆ ಕ್ಲಾರ್ಕ್ * ಪೊತಾ ಅಮೆರಿಕಾದಲ್ಲಿ ಮರಣದಂಡನೆ ವಜಾಮಾಡುವಂತೆ ಕರೆ ಇತ್ತಿರುವರು — ಮರಣದಂಡನೆ ಬದಲು ಜೀವಾಧಿಶಿಕ್ಷೆ — ಈಗ ಅಮೇರಿಕಾದ ಕೆಲವು ರಾಜ್ಯಗಳಲ್ಲಿ ಮಾತ್ರ ಮರಣದಂಡನೆ ಇಲ್ಲ.

ಆಹಾರ ವಲಯಗಳು

ಧಾರವಾಡ— ಅಂತರರಾಜ್ಯಗಳ ಆಹಾರ ಓಡಾಟದ ಮೇಲಿನ ಆಹಾರ ಓಡಾಟದ ಮೇಲಿನ ನಿರ್ಬಂಧಕ್ಕೆ ರಾಜ್ಯ ಸರಕಾರ ವಿರುದ್ಧವಾಗಿದೆ ಎಂದು ಆಹಾರ ಮಂತ್ರಿ ವಿಠಲದಾಸ ಶೆಟ್ಟರು ಹೇಳಿದರು.

★

ಹರೋಡೆಗಾರರ ಬಂಧನ

ಕಡೂರು—ಶಿವಮೊಗ್ಗ-ತರೀಕೆರೆ ರಾಜಮಾರ್ಗದಲ್ಲಿ, ಮತ್ತಿರ 8 ಕಡೆಗಳಲ್ಲಿ ದರೋಡೆ ನಡೆಸಿದ 6 ಜನರಲ್ಲಿ 4 ಮಂದಿ ಬಂಧಿಸಲ್ಪಟ್ಟಿದಾರೆ.

★

ವೋಟು

ನವದೆಹಲಿ— 75 ವರ್ಷಗಳಾದವರಿಗೆ ವೋಟಿನ ಹಕ್ಕಿರಬಾರದೆಂದು ಪಿಎಸ್ಪಿ ನಾಯಕ ಶ್ರೀ ದ್ವಿವೇದಿ ಹೇಳಿರುವರು — ಸ್ವತಂತ್ರ ಪಕ್ಷ ಬಿಟ್ಟು, ಮಿಕ್ಕೆಲ್ಲ ಪಕ್ಷಗಳೂ ವೋಟಿಂಗು ವಯಸ್ಸನ್ನು 21 ರಿಂದ 18 ಕ್ಕೆ ಇಳಿಸಬೇಕೆಂದು ಅಭಿಪ್ರಾಯಪಟ್ಟಿವೆ.

★

ಮೇಲುಕೋಟಿಗೆ ಭೇಟಿ

ಮೈಸೂರು— ಅಸಿಸ್ಟೆಂಟ್ ಇನ್ಫರ್ಮೇಷನ್ ಡೈರೆಕ್ಟರ ಸೌಹಾರ್ದದಿಂದ ಭಾನುವಾರ ಮೇಲುಕೋಟಿಗೆ ನಗರದ ಪತ್ರಿಕೋದ್ಯೋಗಿಗಳ ಭೇಟಿ ಏರ್ಪಡಿಸಲಾಗಿತ್ತು.

ಆಂಧ್ರಕ್ಕೆ ಕೋಲಾರದ ಕೆಲ ಭಾಗ

ನವದೆಹಲಿ— ಕೋಲಾರದ ಕೆಲವು ಭಾಗಗಳನ್ನು ವರ್ಗಾಯಿಸುವ ಮಸೂದೆ ಲೋಕಸಭೆಯಲ್ಲಿ ಮಂಜೂರಾಯಿತು.

ವಿದ್ಯಾರ್ಥಿಗಳ ಭೀಕರ ಪ್ರದರ್ಶನ

ಮಕ್ಸಿಕೊ— ಇಲ್ಲಿ ನಡೆದ ವಿದ್ಯಾರ್ಥಿಗಳ ಪ್ರದರ್ಶನದಲ್ಲಿ, ಪೋಲೀಸರೊಡನೆ ಆದ ಘರ್ಷಣೆಯಲ್ಲಿ 8 ಮಂದಿ ವಿದ್ಯಾರ್ಥಿಗಳು ಸತ್ತು 500 ಮಂದಿ ಗಾಯಗೊಂಡರು — 200 ಮಂದಿಯ ದಸ್ತಗಿರಿ ಆಗಿದೆ.

★

ಜಾಕ್‌ಪಾಟ್

ಬೆಂಗಳೂರು— ಭಾನುವಾರದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲಿನಲ್ಲಿ 1 ಟಿಕೀಟಿಗೆ ರೂ. 517700 ದೊರೆಯಿತು.

★

ದೇಸಾಯರ ವಿರುದ್ಧ ಪ್ರದರ್ಶನ

ವಾರ್ಧಾಗಂಜ್— ಗಾಂಧಿ ಶತಮಾನೋತ್ಸವ ಸಂಬಂಧವಾದ ಸಮ್ಮೇಳನವನ್ನ ಉದ್ಘಾಟಿಸಲು ಇಲ್ಲಿಗೆ ಬಿನ್ನೆ ಉಪಪ್ರಧಾನಿ ಮೊರಾರ್ಜಿ ದೇಸಾಯ ಬಂದಾಗ, ಪೋಲೀಸು ರಕ್ಷಣಾ ಸಾಲನ್ನು ಮುರಿದು ಸಾವಿರ ಜರ ಗುಂಪು ನುಗ್ಗಿ ಅವರ ಮೇಲೆ ಕಲ್ಲು ಮಣ್ಣು ಎಸೆಯಿತು — ಅವರ ಕಾರು ಡ್ಯಾಮೇಜುಗೊಂಡಿತು — 8 ಪೋಲೀಸರೂ ಸೇರಿ 20 ಮಂದಿ ಗಾಯಗೊಂಡರು — ಇದಕ್ಕೆ ಮುಂಚೆ ಪೋಲೀಸರು ಗುಂಪನ್ನು ಚದುರಿಸಲು ಲಾಠಿಚಾರ್ಜು ಮಾಡಿದರು.

★

ಉಪಾಧ್ಯಾಯರ ಚಳವಳಿ

ನವದೆಹಲಿ— ತಮ್ಮ ಕೇಳಿಕೆಗಳು ಫಲಿಸಲು ದೆಲ್ಲೀ ಉಪಾಧ್ಯಾಯರು ಮತ್ತೆ ಚಳವಳಿ ಹೊಡಲಿರುವರೆಂದು ಹೇಳಲಾಗಿದೆ.

ಆಂಧ್ರ ಮುಖ್ಯಮಂತ್ರಿಗಳ ಆಶಯ

ಮೈಸೂರು ಮತ್ತು ಪ್ರದೇಶ ಒಟ್ಟುಗೂಡಿ, ಮುಂದೆಂದಾದರೂ ದ್ವಿಭಾಷಾ ರಾಜ್ಯವಾಗುವುದೆಂಬ ತಮ್ಮ ಆಶಾಭಾವನೆಯನ್ನು ಆಂಧ್ರಪ್ರದೇಶ ಮುಖ್ಯಮಂತ್ರಿಗಳು ವ್ಯಕ್ತಪಡಿಸಿರುವದಾಗಿ ಪ್ರಕಟವಾಗಿದೆ — ಈ ಸಂಯುಕ್ತ ರಾಜ್ಯಕ್ಕೆ ಹೆಸರೇನೋ?

ಮಗುವಿನ ಮಾರಾಟ

ಶಿವಮೊಗ್ಗಾ— ಮಧ್ಯವಯಸ್ಸಿನ ಮಹಿಳೆಯೊಬ್ಬಳು ತೀವ್ರ ಬಡತನದಿಂದ ತನ್ನ ಎರಡೂವರೆ ತಿಂಗಳ ಮಗುವನ್ನು ಮಾತಲು ತರಕಾರಿ ಮಾರುವವರ ಜೊತೆ ಸುತ್ತಾಡಿದಳು — ಪಾರ್ಕ್ ಎಕ್ಸ್‌ಟೆನ್ಷನ್ನಿಗೆ ಬಂದಾಗ ಅಲ್ಲಿಯ ಗೃಹಣಿಯರು ಇವಳ ದುವಸ್ಥೆ ನೋಡಿ ಮರುಗಿ, ಹಾಲು ಬಟ್ಟಿ ಮೊದಲನವ್ದನ್ನು ಕೊಟ್ಟರು — ಮಗುವನ್ನು ಯಾರೂ ಕೊಳ್ಳಲಿಲ್ಲ.

★

ಮುಖ್ಯಮಂತ್ರಿಗಳ ನುಡಿ

ಶಾಯಚೂರು— ಆಹಾರ ಸ್ವಾವಲಂಬನೆ ಮತ್ತು ಆರ್ಥಿಕ ಭದ್ರತೆ ಮಾತ್ರ ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯವನ್ನು ಬಲಪಡಿಸಬಲ್ಲವು ಎಂದು, ಪಂಚಾಯತ್ ಇತ್ಯಾದಿ ಸಂಬಂಧಿಸಿದ ಸೆಮಿನಾರನ್ನು ಉದ್ಘಾಟಿಸುತ್ತಾ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

★

ಆಹಾರಧಾನ್ಯಗಳ ಆಮದು

ಸೇವಾಗ್ರಾಮ— 2–3 ವರ್ಷಗಳನಂತರ ಆಹಾರಧಾನ್ಯಗಳ ಆಮದಿಲ್ಲವೆಂದು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರು ಘೋಷಿಸಿದರು — 2–3 ವರ್ಷಗಳೊಳಗೆ ದೇಶದಲ್ಲಿ ವ್ಯವಸಾಯೋತ್ಪನ್ನವು ಹೇರಳವಾಗಿರುವದೆಂದರು.

ಹಿಂದೂಗಳ ಆಚಾರ

ಸಂಗ್ರಾಹಕರು— ' ಶಾಸ್ತ್ರಧರ್ಮನಿರತ " ಆನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

ರಾಜಕೀಯವಾಗಿ ನಮಗೆ ಸ್ವತಂತ್ರ ದೊರಕಿದ್ದರೂ, ಧಾರ್ಮಿಕ ಸ್ವಾತಂತ್ರ್ಯ ದೊರಕಿಲ್ಲ. ಇದಕ್ಕೆ ಕಾರಣವೆಂದರೆ, ಹಿಂದೂಧರ್ಮದ ಬಗ್ಗೆ ತಿಳುವಳಿಕೆಯಿಲ್ಲದ, ತಿರಸ್ಕಾರ ಹೊಂದಿರುವವರ ಕೈಯಲ್ಲೇ ರಾಜ್ಯದ ಆಡಳಿತ ಸಿಕ್ಕಿದೆ. ಇದರಿಂದ ವರ್ಣವ್ಯವಸ್ಥೆಯನ್ನು ಕೆಡಿಸುವ, ಆಚಾರವನ್ನು ಅನುಷ್ಠಿಸಲು ಸಾಧ್ಯವಾಗದಂತಹ ಶಾಸನಗಳು ಆಗುತ್ತಿವೆ. ಹೆಸರಿಗೆ ಪ್ರಜಾಪ್ರಭುತ್ವವೆಂದು ಹೇಳಿದರೂ, ಸುಪ್ತಾವಸ್ಥೆಯಲ್ಲಿರುವ ಹಿಂದೂ ಸಮಾಜವು ಈ ರೀತಿಯ ಶಾಸನಗಳಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೇ ಇಹದೆ.

ಶಾಸ್ತ್ರಗಳು ' ಬುದಿಃ ಕರ್ಮಾನುಸಾರಿಣೀ " ಎಂಬುದಾಗಿ ಹೇಳುತ್ತವೆ. ನಾವು ಯಾವ ರೀತಿಯ ಕೆಲಸಗಳನ್ನು ಮಾಡುತ್ತಾ ಇರುತ್ತೇವೆಯೋ ಅದೇ ಪ್ರಕಾರ ಪ್ರಜ್ಞೋದಯ ಮಾಡುತ್ತದೆ. ಒಬ್ಬ ಪ್ರಾಮಾಣೀಕನಾದ ವ್ಯಕ್ತಿಯು, ಅಕಸ್ಮಾತ್ತಾಗಿ ಹುತ್ತೊಬ್ಬಳ ಪವಾರ್ಥವು ತನ್ನ ಗಂಟಿನಲ್ಲಿ ಸೇರಿದ್ದರೆ ಎಷ್ಟು ಪರಿತಾಪಪಡುತ್ತಾನೋ, ಅಷ್ಟೇ ಪರಿತಾಪವನ್ನು ಒಬ್ಬ ಕಳ್ಳನು ತಾನು ಕಳವು ಮಾಡಲು ಹೋಗಿ, ಸಾಧ್ಯವಾಗದಿದ್ದಾಗ ಹೊಂದುತ್ತಾನೆ. ಇದೇ ರೀತಿಯಲ್ಲಿ ಸಂಧ್ಯಾವಂದನೆ ಮಾಡುತಿರುವವನುಷ್ಯನು ಒಂದು ವೇಳೆ ಸಂಧ್ಯಾವಂದನೆ ಮಾಡದೆ ಆಹಾರವನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಅದೇ ರೀತಿ ಸಂಧ್ಯಾವಂದನೆ ಅಭ್ಯಾಸ ಇಟ್ಟುಕೊಳ್ಳದೇ ಇರುವವನು ಒಂದು ವೇಳೆ ಸಂಧ್ಯಾವಂದನೆ ಮಾಡಲೇ ಬೇಕಾದ ಪರಿಸ್ಥಿತಿ ಒದಗಿದರೆ ಅಸಾಧ್ಯವಾದ ಕೆಲಸಕ್ಕೆ ಕೈ ಹಾಕಿದಂತೆ ಭಾವಿಸುತ್ತಾನೆ. ಆದುದರಿಂದ ಆಚಾರಗಳನ್ನು ಅನುಷ್ಠಿಸುವುದಕ್ಕಾಗಲೀ, ಬಿಡುವುದಕ್ಕಾಗಲೀ, ಅಭ್ಯಾಸವೇ ಕಾರಣ. ಬೇರೆ ಯಾವುದೇ ತತ್ವವು ಇದಕ್ಕೆ ಆಧಾರವಲ್ಲ.

Golden Jubilee of 'Satyavadi'

The golden jubilee of the 'Satyavadi' is to be celebrated on July 28th.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಆಶೋಕ ಬಿಡಿನ್‌ಸಿನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಬಯಿಸೋದ ಬಟ್ಟೆಗಳಿಗೆ ನಮ್ಮಲ್ಲಿ ದೊರೆಯುತ್ತವೆ

ವುಡ್‌ಲಾಂಡ್ಸ್ ಅಮೋಘ 5 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಅಪೆರ— ಜನಪ್ರಿಯ 4 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವಥ್ ದಾಮೋದರ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾಜಗದ್ಗುರು ಪೂಜ್ಯಶ್ರೀಪಾದಂಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಂಗಳವರು ಕೃಪಾಶೀರ್ವಾದ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ಪ್ರಚಾರದೆಯೆ, ತಕ್ಷಣಾಹಾರ ಪಶುವೈದ್ಯ, ಎಜೆನ್ಸಿಗಳ ಏಜೆಂಟ್ ಪ್ರಯಾಣ ಖರ್ಚಿಗೆ : ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣೆ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಚೀಟುಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳಿಸಿರುವವರು ಇವೆಂಟ್ಟಿ ಚಂದಾ ಸಾಪತ್ಯಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣಸ್ವಾಮಿ, ಶ್ರೀ ಪಿ.ಸಿ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ಏಡಿಯಾರಣ್ಯಪುರಂ, ಮೈಸೂರು

ಶ್ರೀ ಆನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ ಹೊಂಗನೂರು

ಗೋರಕ್ಷಣಾ ಆಫೀಸು, ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow.

★

ಗೋರಕ್ಷಣೆ ರುಷಿ, ಪಿತೃಋಣವು ತೀರಿಸಲು ಹಾಲು ಹಣ್ಣಿನ ನಡೆಯಲಿ

Edited, Printed & Published by Dharmaprachara Niratha M S Krishna Rao (Proprietor) at the Satyavadi Press Chamarajapuram, Mysore 4